## ಹೊಟ್ಟೆನೋವು!

ಜುಗ್ಗಪ್ಪನಿಗೆ ಹೊಟ್ಟೆನೋವು ಬಂತು. ದವಾಖಾನೆಗೆ ಬಂದ. ಬೋರ್ಡ್ ನೋಡಿದ. ಮೊದಲ ಸಲದ ಚೆಕಪ್ಪಿಗೆ ಐನೂರು ರೂಪಾಯಿ ಫೀ, ಅನಂತರದ ಚೆಕಪ್ಪಿಗೆ ನೂರು ರೂಪಾಯಿ ಫೀ ಎಂದು ಬರೆದಿತ್ತು. ಜುಗ್ಗ ದುಡ್ಡು ಉಳಿಸುವ ಉಪಾಯ ಮಾಡಿದ. ನೂರು ರೂಪಾಯಿ ಚೀಟಿ ಹರಿಸಿ ಡಾಕ್ಟರ್ ಬಳಿ ಹೋದ. 'ಡಾಕ್ಟ್ರೇ, ಹೋದಸಾರಿ ನೀವು ಕೊಟ್ಟ ಮಾತ್ರೆಯಿಂದ ಹೊಟ್ಟೆನೋವು ಕಡಿಮೆಯಾಗಲೇ ಇಲ್ಲ. ಏನ್ಮಾಡೋದು?' ಎಂದ. 'ಇನ್ನೊಂದು ವಾರ ಅವೇ ಮಾತ್ರೆ ತಗೋ ಕಡಿಮೆಯಾಗುತ್ತೆ' ಅಂದರು ಡಾಕ್ಟರು!

**ಪ್ರಕಾಶ ಎಸ್. ಮನ್ನಂಗಿ**





## ಹೆತ್ತವರ ಸಹಿ

ಪುಟ್ಟ ಚೂಟಿ ಹುಡುಗ. ಅವನ ಪರೀಕ್ಷೆಗಳು ಮುಗಿದು ಮಾರ್ಕ್ಸ್ ಕಾರ್ಡ್ ಕೊಡುತ್ತ ಹೆತ್ತವರ ಸಹಿ ಹಾಕಿ ತರುವಂತೆ ಟೀಚರ್ ಹೇಳಿದ್ದರು. ಪುಟ್ಟ ಸೀದಾ ಮನೆಗೆ ಹೋದವನೇ ಅಂಕ ಪಟ್ಟಿಯನ್ನು ತನ್ನ ಅಕ್ಕನಿಗೆ ನೀಡುತ್ತ, 'ಅಕ್ಕ ಇದಕ್ಕೊಂದು ಸಹಿ ಹಾಕಿ ಕೊಡು' ಎಂದ. ಅವಳು ಆಶ್ಚರ್ಯಪಡುತ್ತ, 'ನನ್ನ ಸಹಿ ಯಾಕೋ ಪುಟ್ಟ?' ಎಂದು ಕೇಳಿದಳು. ಆಗ ಪುಟ್ಟ, 'ಹೆತ್ತವರ ಸಹಿ ಹಾಕಿ ತರುವಂತೆ ಟೀಚರ್ ಹೇಳಿದ್ದಾರೆ. ನೀನು ಇಂದು ತಾನೇ ಹೆತ್ತಿದ್ದೀಯಲ್ಲ, ಅದಕ್ಕೆ ನೀನೇ ಸಹಿ ಮಾಡಿ ಕೊಡು' ಎಂದ!

**ಪಿ. ಜಯವಂತ ಪೈ**